ಶ್ರೀ ಸಿ.ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಾವು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೆವು. ಅದು ಪ್ರಸ್ತಾಪ ಆಗಿಲ್ಲ...

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ಸಮಯದಲ್ಲಿ ಕ್ಲಾರಿಫಿಕೇಷನ್ ಕೇಳಿ ಎಂದು ಹೇಳಿದ್ದೆ.

ಶ್ರೀ ಆರ್.ವಿ.ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ಮಂಗಳೂರು ಕೆಮಿಕಲ್ ಫರ್ಟಿಲೈಸರ್ಸ್ ಲಿ. ಕಂಪನಿ ಬಗ್ಗೆ ಮಾನ್ಯ ಸದಸ್ಯರು ನಿಲುವಳಿ ಸೂಚನೆ ಕೊಟ್ಟಿದ್ದಾರೆ. ಇದನ್ನು ನಿಲುವಳಿ ಸೂಚನೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅವರಿಗೆ ಬೇಕಾಗಿರುವ ಇನ್‌ಫರ್ಮೇಷನ್‌ನ್ನು ಕೊಡಲಿಕ್ಕೆ ಬೇಕಾದರೆ ನಾನು ತಯಾರಿದ್ದೇನೆ.

ಅಧ್ಯಕ್ಷರು: ಮಾನ್ಯ ಬೈರೇಗೌಡರೆ, ಸಂಬಂಧಪಟ್ಟ ಮಾನ್ಯ ಸಚಿವರು ತಮಗೆ ಇನ್‌ಫರ್ಮೇಷನನ್ನು ಕೊಡುವುದಕ್ಕೆ ತಯಾರಿದ್ದಾರೆ. ಆದ್ದರಿಂದ ನಿಲುವಳಿ ಸೂಚನೆಯನ್ನು ಬಿಟ್ಟುಬಿಡಿ.

(3) ನಿಲುವಳಿ ಸೂಚನೆ. (1) ಎಂ.ಸಿ.ಎಫ್. ಗೊಬ್ಬರದ ಕಾರ್ಖಾನೆ ಕುರಿತು.

+ಶ್ರೀ ಸಿ.ಬೈರೇಗೌಡ (ವೇಮಗಲ್): ಮಾನ್ಯ ಅಧ್ಯಕ್ಷರೆ, ಇದೀಗ ತಾನೆ ಮಾನ್ಯ ಮುಖ್ಯಮಂತ್ರಿಗಳು ರೈತರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಅಷ್ಟರಮಟ್ಟಿಗೆ ತೃಪ್ತಿಯನ್ನು ವ್ಯಕ್ತಪಡಿಸುತ್ತೇನೆ. ರಸಗೊಬ್ಬರವನ್ನು ತಯಾರು ಮಾಡತಕ್ಕಂಥ ಒಂದೇ ಒಂದು ಕಾರ್ಖಾನೆ ಕರ್ನಾಟಕದಲ್ಲಿದೆ. ಇದು ಪ್ರಾರಂಭದಲ್ಲಿ ಜಂಟಿ ವಲಯದಲ್ಲಿ ಪ್ರಾರಂಭವಾಗಿರತಕ್ಕಂಥ ಕಾರ್ಖಾನೆ. ಆ ಕಾರ್ಖಾನೆಯ ಮೇಲೆ ಸಾಕಷ್ಟು ರಾಜ್ಯಸರ್ಕಾರದ ಹಿಡಿತ ಕೂಡ ಇತ್ತು. ನಮಗಿಂತ ಹಿಂದೆ ಇದ್ದಂಥ ಸರ್ಕಾರ ನಾನಾ ಕಾರಣಗಳಿಂದ ಖಾಸಗೀಕರಣ ಮಾಡುತ್ತೇವೆಂದು ಹೇಳಿ ಖಾಸಗೀಕರಣಕ್ಕೆ ಒತ್ತು ಕೊಟ್ಟರು, ಅನಂತರ ಆ ಕಾರ್ಖಾನೆ ಖಾಸಗೀಕರಣವಾಯಿತು. ಈ ದೇಶದಲ್ಲಿ ಒಂದು ವಾತಾವರಣ, ಏನು ನಿರ್ಮಾಣ ಆಗಿದೆ ಎಂದರೆ ಪ್ರತಿಯೊಂದಕ್ಕೂ ಖಾಸಗೀಕರಣ ಒಂದು ದಿವ್ಯ ಔಷಧಿ ಎಂದು, ಆ ರೀತಿಯಾದಂಥ ಬೆಳವಣಿಗೆ, ಒಂದು ಮಾತು, ಆ ರೀತಿಯಾದ ಚರ್ಚೆ ನಡೆಯುತ್ತಿದೆ. ಈ ಕಾರ್ಖಾನೆ ಖಾಸಗೀಕರಣ ಆದಮೇಲೆ ಅದಕ್ಕೆ ವಿರುದ್ಧವಾದಂಥ ದಿಕ್ಕಿನಲ್ಲಿ ಸದರಿ ಕಾರ್ಖಾನೆ ನಡೆದುಬಂದಿದೆ. ಕೆಲವು ಕಾಲ ಆ ಕಾರ್ಖಾನೆಯಲ್ಲಿ ಇರತಕ್ಕಂಥ ಉತ್ಪಾದನೆ ಸ್ಥಗಿತಗೊಳ್ಳತಕ್ಕಂಥಾದ್ದು, ಪ್ರಾರಂಭಗೊಳ್ಳತಕ್ಕಂಥಾದ್ದು ನಡೆದುಕೊಂಡು ಬಂದಿದೆ.

ಈ ವಿಚಾರವನ್ನು ನಾನು ಇಲ್ಲಿ ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ- ಕರ್ನಾಟಕ ರಾಜ್ಯದ ರೈತರ ಹಿತದೃಷ್ಟಿಯಿಂದ ಇದು ಬಹಳ ಮುಖ್ಯವಾಗಿ ಇರತಕ್ಕಂಥ ಕಾರ್ಖಾನೆ. ಲಾಭ ನಷ್ಟಕ್ಕಿಂತ ಹೆಚ್ಚಾಗಿ ರೈತರ ಹಿತವನ್ನು ಕಾಪಾಡಬೇಕಾಗಿರತಕ್ಕಂಥಾದ್ದು ಬಹಳ ಮುಖ್ಯ. ಈಗ ಇದ್ದಕ್ಕಿದ್ದ ಹಾಗೆ ಮಳೆ ಇರುವುದಿಲ್ಲ, ಒಂದು ದಿವಸ ದಿಢೀರ್ ಎಂದು ಒಂದು ರಾತ್ರಿ ಮಳೆ ಬಹುತ್ತದೆ. ಮಾನ್ಯ ಅಧ್ಯಕ್ಷರೆ, ಇದು ತಮ್ಮ ಅನುಭವಕ್ಕೂ ಬಂದಿರುತ್ತದೆ ಎಂದು ಭಾವಿಸಿದ್ದೇನೆ. ಬೆಳಿಗ್ಗೆ ರೈತ ಬಿತ್ತನೆ ಮಾಡಬೇಕಾಗುತ್ತದೆ. ಇವತ್ತು ರೈತರು ಕೂಡ ಬಹಳ ಸರಳ ವಿಧಾನಗಳನ್ನು

ಅನುಸರಿಸಿಕೊಂಡು ವ್ಯವಸಾಯವನ್ನು ಮುಂದುವರೆಸಿಕೊಂಡು ಹೋಗುತ್ತಾರೆ. ಮೊದಲೆಲ್ಲ ಭೂಮಿಗೆ ಫಲವತ್ತತೆಯನ್ನು ಉಂಟುಮಾಡಬೇಕಿದ್ದರೆ ನಾವು ಹೆಚ್ಚಿಚ್ಚು ಸ್ವಾಭಾವಿಕ ಗೊಬ್ಬರಗಳನ್ನು ಬಳಸುತ್ತಿದ್ದೆವು. ಆದರೆ ಈಗ ಕೃತಕ ಗೊಬ್ಬರಗಳನ್ನು ಬಳಸತಕ್ಕಂಥ ಅಭ್ಯಾಸ ರೈತರಲ್ಲಿ ಕೂಡ ಬೆಳೆದಿದೆ. ಜೊತೆಗೆ ಇವತ್ತಿನ ದಿವಸ ಕೃತಕಗೊಬ್ಬರ, ರಸಗೊಬ್ಬರ ಇಲ್ಲದಿದ್ದರೆ ಬೆಳೆಯನ್ನು ತೆಗೆಯುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಪರಿಸ್ಥಿತಿ ಸಹ ಆಗಿದೆ. ಮಳೆ ಬಂದಂಥ ಕಾಲದಲ್ಲಿ ಬಿತ್ತನೆ ಹಾಕುವಾಗ ಗೊಬ್ಬರ ಮತ್ತು ಬೀಜ ಎಲ್ಲವನ್ನೂ ಒಂದೇ ದಿವಸ ರೈತ ಹೊಲಕ್ಕೆ ತೆಗೆದುಕೊಂಡು ಹೋಗತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ರಾಜ್ಯದಲ್ಲಿ ರಸಗೊಬ್ಬರದ ಬಳಕೆ ಸಾಕಷ್ಟು ಆಗುತ್ತಿದೆ. ಆದರೆ ಆ ಕೃತಕ ಗೊಬ್ಬರದ ಉತ್ಪಾದನೆ ಮಾತ್ರ ದೂರ ದೂರದ ರಾಜ್ಯಗಳಲ್ಲಿ ಆಗುತ್ತದೆ. ತಮಿಳುನಾಡಿನಲ್ಲಿ ಒಂದೆರಡು ಕಾರ್ಖಾನೆಗಳು ಇರಬಹುದು, ಕೇರಳದಲ್ಲಿ ಒಂದು ಕಾರ್ಖಾನೆ ಇದೆ, ಉತ್ತರ ಪ್ರದೇಶದಲ್ಲಿ ಇರತಕ್ಕಂಥವು, ಮತ್ತು ಮಹಾರಾಷ್ಟ್ರದಲ್ಲಿ ಕಾರ್ಖಾನೆಗಳು ಇವೆ; ಹೀಗೆ ದೂರದ ರಾಜ್ಯಗಳಿಂದ ಗೊಬ್ಬರ ಬರಬೇಕಾಗುತ್ತದೆ. ಈ ರೈತನಿಗೆ ಬೇಕಾಗಿರತಕ್ಕಂಥ ಸಮಯದಲ್ಲಿ ಈ ಸಾಗಾಣಿಕೆಗೆ ಇರತಕ್ಕಂಥ ಅಡೆತಡೆಗಳಿಂದ ಗೊಬ್ಬರ ಸಿಗುವುದಿಲ್ಲ. ನಾನು ಹಿಂದೆ ಕೃಷಿಮಂತ್ರಿಯಾಗಿ ಕೆಲಸ ಮಾಡಿದ್ದು ನನ್ನ ಅನುಭವವನ್ನು ಸಹ ಇಲ್ಲಿ ಹಂಚಿಕೊಳ್ಳುವುದಕ್ಕೆ ಬಯಸುತ್ತೇನೆ. ರಾತ್ರಿ 2 ಗಂಟೆ ಸಮಯದಲ್ಲಿ ಗೊಬ್ಬರದ ಒಂದು ಕಂಪನಿಯ ಗೊಡನ್ ಹತ್ತಿರ ನಾನೇ ಹೋಗಿ ನಿಂತು ಲಾರಿಗಳಲ್ಲಿ ಗೊಬ್ಬರವನ್ನು ತುಂಬಿಸಿರತಕ್ಕಂಥ ನಿದರ್ಶನಗಳು ಕೂಡ ಇವೆ. ನಮ್ಮ ಸ್ನೇಹಿತರಾದ ಶ್ರೀ ಜಯಪ್ರಕಾಶ್ ಹೆಗಡೆ ಮತ್ತು ನಾನು ಹೋಗಿ ಮಂಗಳೂರು ಬಂದರಿನಲ್ಲಿ ಬಂದಿರತಕ್ಕಂಥ ಹಡಗಿನಿಂದ ಗೊಬ್ಬರವನ್ನು ಇಳಿಸತಕ್ಕಂಥ ಕಾರ್ಯಕ್ರಮದಲ್ಲಿ ನಾವು ಅಲ್ಲಿ ನಿಂತು ಗೊಬ್ಬರ ಇಳಿಸತಕ್ಕಂಥ ಕಾರ್ಯದಲ್ಲಿ ಭಾಗಿಯಾಗಬೇಕಾಯಿತು. ಕಾರಣ ಏನೆಂದರೆ ಸಮಯಕ್ಕೆ ಸರಿಯಾಗಿ ಗೊಬ್ಬರ ಸರಬರಾಜು ಆಗುತ್ತಿಲ್ಲ. ನಮ್ಮ ರಾಜ್ಯದಲ್ಲಿ ಒಂದೇ ಒಂದು ಗೊಬ್ಬರದ ಕಾರ್ಖಾನೆ ಇದ್ದು ಅದನ್ನು ಮುಚ್ಚತಕ್ಕಂಥ ಸೂಚನೆ ಕೊಟ್ಟಿದ್ದಾರೆ. ಆ ರೀತಿಯಾಗಿ ಮುಚ್ಚುವಂಥ ಪರಿಸ್ಥಿತಿ ಬಂದರೆ ನಮ್ಮ ರೈತರ ಪರಿಸ್ಥಿತಿ ಚಿಂತಾಜನಕವಾಗುತ್ತದೆ. ಬಿತ್ತನೆ ಹಾಕುವಂಥ ಸಂದರ್ಭದಲ್ಲಿ ಗೊಬ್ಬರ ಇಲ್ಲದಿದ್ದರೆ ಆ ವರ್ಷದ ಬೆಳೆಯನ್ನು ರೈತರು ಕಳೆದುಕೊಳ್ಳತಕ್ಕಂಥ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಈ ಕಾರ್ಖಾನೆಯನ್ನು ಏನಾದರೂ ಮಾಡಿ ಉಳಿಸಿಕೊಳ್ಳಬೇಕಾಗಿರತಕ್ಕಂಥಾದ್ದು ಇವತ್ತು ರೈತರ ದೃಷ್ಟಿಯಿಂದ ಅವಶ್ಯಕ ಎನ್ನುವುದನ್ನು ನಾನು ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಆ ಕಾರ್ಖಾನೆಯಲ್ಲಿ ಕಾರ್ಮಿಕರು ಸಹ ಇದ್ದಾರೆ ಮತ್ತು ಅವರು ನಮ್ಮ ಕರಾವಳಿ ಪ್ರದೇಶದಲ್ಲಿರತಕ್ಕಂಥ ಕಾರ್ಮಿಕರಾಗಿದ್ದಾರೆ. ಈ ಕಾರ್ಖಾನೆಯನ್ನು ಮುಚ್ಚಿದರೆ ಅವರ ಗತಿ ಏನಾಗಬೇಕು? ಅನ್ನತಕ್ಕಂಥಾದ್ದು ಕೂಡ ಬಹಳ ಪ್ರಮುಖವಾದ ಪ್ರಶ್ನೆಯಾಗಿದೆ. ಈ ಎರಡು ದೃಷ್ಟಿಯಿಂದ ಅಂದರೆ ರಾಜ್ಯದ ರೈತರ ಹಿತದೃಷ್ಟಿಯಿಂದ ಮತ್ತು ಆ ಕಾರ್ಮಿಕರ ಹಿತದೃಷ್ಟಿಯಿಂದ ಇದನ್ನು ಮುಚ್ಚತಕ್ಕಂಥಾದ್ದಕ್ಕೆ ಅವಕಾಶ ಆಗಬಾರದು ಎಂದು ನಾನು ಹೇಳುತ್ತೇನೆ. ಇದರಲ್ಲಿ ರಾಜ್ಯ ಸರ್ಕಾರದ ಜವಾಬ್ದಾರಿ ಕೂಡ ಇದೆ. ಆ ಕಾರ್ಖಾನೆ ಖಾಸಗಿ ಆಡಳಿತದಲ್ಲಿ ಇದೆ ಎಂದು ನೀವು ಹೇಳಬಹುದು. ಆದರೆ ನಮ್ಮ ರೈತರಿಗೆ ಆಗತಕ್ಕಂಥ ಅನಾನುಕೂಲದ ಕಾರಣದಿಂದ ಮತ್ತು ಅಲ್ಲಿ ಕಾರ್ಮಿಕರ ಹಿತವನ್ನು ಕಾಪಾಡಬೇಕಾಗಿರುವ ಕಾರಣದಿಂದ ಇದನ್ನು ಮುಚ್ಚುವುದಕ್ಕೆ ಅವಕಾಶ ಕೊಡಬಾರದು; ಆ ಕಾರ್ಖಾನೆಯನ್ನು ಏನಾದರೂ ಮಾಡಿ ಉಳಿಸಿಕೊಳ್ಳಲೇಬೇಕು, ಇದು ನನ್ನ ಆಗ್ರಹ ಎಂದು ಈ ಮೂಲಕ ನಾನು ಹೇಳುವುದಕ್ಕೆ

ಇಚ್ಛಿಪಡುತ್ತೇನೆ.

+ಶ್ರೀ ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ಎಂ.ಸಿ.ಎಫ್ ಬಗ್ಗೆ ನಮ್ಮ ಸ್ನೇಹಿತರು ಮಾತನಾಡಿದರು. ನಾನು ನಿನ್ನೆಯ ದಿವಸ ಮಾತನಾಡುತ್ತಾ, ಬಹಳಷ್ಟು ಸಾರ್ವಜನಿಕ, ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ಸ್‌ನ್ನು ಖಾಸಗೀಕರಣಗೊಳಿಸುವಂಥಾದ್ದು, ಲಾಸ್ಟ್‌ನಲ್ಲಿ ನೀವು ಪ್ರೈವೇಟ್ ಸೆಕ್ಟಾರ್ಸ್‌ನ್ನು ಟೇಕ್‌ಓವರ್ ಮಾಡುವಂಥ ಪರಿಸ್ಥಿತಿ, ಇದೂ ಒಂದು. ಒಂದು ದೇವಿ ಶುಗರ್ಸ್ ಕಂಪನಿ, ಇನ್ನೊಂದು ಎಂ.ಸಿ.ಎಫ್. ಇವೆರಡು ನಿದರ್ಶನಗಳನ್ನು ನಾನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇದರಲ್ಲಿ ನಷ್ಟ ಆಗಿಲ್ಲ. ಇದು ನಮ್ಮ ಎಕನಾಮಿಕ್ ಥಿಯರಿಯಲ್ಲಿಯೇ ಬರುತ್ತದೆ. ಈ ರೀತಿಯ ಒಂದು ವ್ಯವಸ್ಥೆ ಅಲ್ಲಿ ಆಗಿದೆ. ಹಿಂದೆ ಅಲ್ಲಿ ಕಾರ್ಮಿಕರ ಸ್ಟ್ರೈಕ್ ಆದಾಗ ಮಾನ್ಯ ಸಿಂಧ್ಯಾರವರು ಗೃಹಸಚಿವರಾಗಿದ್ದರು ನಾನು ಮತ್ತು ಅವರು ಅಲ್ಲಿಗೆ ಮೊದಲು ಹೋಗಿದ್ದವರು; ಆಮೇಲೆ ಮಾನ್ಯ ಭೈರೇಗೌಡರು ಬಂದು ಅಲ್ಲಿ ಸರಿಯಾದ ವ್ಯವಸ್ಥೆ ಮಾಡಿದರು. ಇತ್ತೀಚೆಗೆ ಅಲ್ಲಿ ಸ್ಟ್ರೈಕ್ ನಡೆಯುತ್ತಿಲ್ಲ. ಕಾರ್ಮಿಕರ ದೋಷದಿಂದ ಆ ಕಾರ್ಖಾನೆಗೆ ನಷ್ಟ ಆಗಿಲ್ಲ. ಏಕೆ ನಷ್ಟ ಆಗಿದೆ ಎನ್ನುವುದರ ಬಗ್ಗೆ ಸ್ವಲ್ಪ ಪರಿಶೀಲನೆ ಮಾಡಬೇಕಾಗುತ್ತದೆ. ಈ ಕಾರ್ಖಾನೆಯನ್ನು ಖಾಸಗೀಕರಣಗೊಳಿಸಿದ ಮೇಲೆ ಅವರಿಗೆ ಎಷ್ಟು ಹಣವನ್ನು ಸ್ಟೈಫಂಡ್ ಮಾಡಿದ್ದಾರೆ, ಸರ್ಕಾರ ಅವರಿಗೆ ಕೊಟ್ಟ ಮೇಲೆ ಸರ್ಕಾರಕ್ಕೆ ಎಷ್ಟು ನಷ್ಟ ಆಗಿದೆ, ಇದರ ಬಗ್ಗೆ ಕೂಡ ಗಮನಹರಿಸಬೇಕಾಗುತ್ತದೆ. ನಮ್ಮಲ್ಲಿ ಕಿಂಫ್ಕೋ, ಹಿಫ್ಕೋ, ರಾಷ್ಟ್ರೀಯ ಕೆಮಿಕಲ್ಸ್ ಇದೆ, ಇದನ್ನು ಯಾರು ಬೇಕಾದರೂ ನಡೆಸಲಿಕ್ಕೆ ಸಾಧ್ಯ ಇದೆ. ಇವತ್ತಿನ ದಿವಸ ಆ ಕಾರ್ಖಾನೆಯ ಆಡಳಿತವರ್ಗದವರಿಗೆ ಅದನ್ನು ಸರಿಯಾಗಿ ನಡೆಸುವುದಕ್ಕೆ ಆಗುವುದಿಲ್ಲ ಎಂದು ಹೇಳಿದರೆ ಹೇಗೆ? ನೇರವಾಗಿ ಆ ಕಾರ್ಖಾನೆಯನ್ನು ಬಂದ್ ಮಾಡುವಂಥ ತೀರ್ಮಾನವನ್ನು ತೆಗೆದುಕೊಳ್ಳುವುದು ಸರಿಯಲ್ಲವೆಂದು ನಾನು ಹೇಳುತ್ತೇನೆ. ಮಾನ್ಯ ಸಚಿವರು ಇದರ ಬಗ್ಗೆ ಹೆಚ್ಚು ಗಮನಹರಿಸಬೇಕೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

+ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ): ಮಾನ್ಯ ಅಧ್ಯಕ್ಷರೆ, ನಾನು ಕ್ರಿಭ್ಕೋ ಅಧ್ಯಕ್ಷನಾಗಿ, ಎಂ.ಸಿ.ಎಫ್.ನ್ನು ತೆಗೆದುಕೊಳ್ಳಬೇಕೆಂದು ಬಿ.ಐ.ಎಫ್.ಆರ್.ಗೆ ಕ್ರಿಭ್ಕೋ ಮೂಲಕ ಅಪ್ಲೈ ಮಾಡಿಸಿದೆ. ಆಗ ಒಂದು ಪ್ಯಾಕೇಜ್ ಕೊಟ್ಟರು. ಆ ಪ್ಯಾಕೇಜ್‌ನಲ್ಲಿ ನಮ್ಮ ಸರ್ಕಾರ ಅಂದರೆ ರಾಜ್ಯ ಸರ್ಕಾರ 100 ಕೋಟಿ ರೂಪಾಯಿಗಳನ್ನು ಕೊಟ್ಟರೆ, ಅದನ್ನು ಕ್ರಿಭ್ಕೋದವರು ತೆಗೆದುಕೊಂಡು ನಡೆಸುವ ವ್ಯವಸ್ಥೆಯನ್ನು ನಾನು ಅಧ್ಯಕ್ಷನಾಗಿದ್ದಾಗ ಮಾಡಿದಾಗ, ಒಂದು ಮಟ್ಟಕ್ಕೆ ಬಂತು. ಆಗ ನಾನು ಸರ್ಕಾರಕ್ಕೆ, 100 ಕೋಟಿ ರೂಪಾಯಿಗಳನ್ನು ಕೊಡಿ ಟೇಕ್‌ಓವರ್ ಮಾಡೋಣ, ಕೇವಲ 10 ಕೋಟಿ ರೂಪಾಯಿಗಳನ್ನು ಕೊಟ್ಟು ಎಂಸಿಎಫ್‌ನ್ನು ಇವತ್ತು ಖಾಸಗಿಯವರ ಮುಖಾಂತರ ತೆಗೆದುಕೊಂಡು, ಕನಿಷ್ಟ 10 ಕೋಟಿ ಅಲ್ಲ, 100 ಕೋಟಿ ರೂಪಾಯಿಗಳನ್ನು ಸರ್ಕಾರದವರು ಕೊಡಿ, ಅದನ್ನು ನಾವು ತೆಗೆದುಕೊಂಡು ನಡೆಸುತ್ತೇವೆ, 2,500 ಕೋಟಿ ರೂಪಾಯಿಗಳನ್ನು ಅದರ ಮೇಲೆ ಇನ್‌ವೆಸ್ಟ್ ಮಾಡಿ ಡೆವಲಪ್ ಮಾಡುತ್ತೇವೆಂಬ ಮಾತನ್ನು ಹೇಳಿ ಪ್ರಸ್ತಾವನೆ ತಂದೆ. ಕೊನೆಗೆ, ಆಗಿನ ಸರ್ಕಾರ ನಮ್ಮ ಸರ್ಕಾರವೇ ಇದ್ದಿರಬಹುದು, ನಾನು ನೊಂದು ಹೇಳುತ್ತೇನೆ, ಆ ಸರ್ಕಾರ ಪುರಾವೆ ಕೊಡಲಿಲ್ಲ. ನಾನು ಈಗ ಆ ಸಂಸ್ಥೆಯಲ್ಲಿ ನಿರ್ದೇಶಕನಾಗಿದ್ದೇನೆ. ಈಗಲೂ ಕೂಡ ಸರ್ಕಾರದವರು 100 ಕೋಟಿ ರೂಪಾಯಿಗಳನ್ನು

ಕೊಟ್ಟರೆ, ಅಲ್ಲಿನ ಕಾರ್ಮಿಕರು ಉಳಿಯುತ್ತಾರೆ. ಇನ್ನೂ 2500 ಕೋಟಿ ರೂಪಾಯಿಗಳನ್ನು ಹಾಕಿ ಅದನ್ನು ಮತ್ತೆ ನಮ್ಮ ಕೈಗೆ ಅಂದರೆ ಕ್ರಿಭ್ಕೋ ಸಂಸ್ಥೆಗೆ ತೆಗೆದುಕೊಂಡು ನಡೆಸುತ್ತೇವೆಂಬ ಮಾತನ್ನು ಈ ಸಭೆಯಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಹೇಳಲು ಬಯಸುತ್ತೇನೆ. ಇದಕ್ಕೆ ಸರ್ಕಾರದವರು ದೃಢ ಮನಸ್ಸು ಮಾಡಿ, 100 ಕೋಟಿ ರೂಪಾಯಿಗಳನ್ನು ಕೊಟ್ಟು ಮತ್ತೆ ಬಿಐಎಫ್ಆರ್‌ಗೆ ಹೋಗಿ, ಅದನ್ನೆಲ್ಲ ತೆಗೆದು, ಮತ್ತೆ ಅದನ್ನು ನಡೆಸುವ ಅವಕಾಶ ಕಲ್ಪಿಸಿಕೊಡಿ. ಮಾನ್ಯ ಬೈರೇಗೌಡರವರು ಹೇಳಿದ ಹಾಗೆ, ರೈತರಿಗೂ ಅದರಿಂದ ಅನುಕೂಲವಾಗುತ್ತದೆ. ಡಿ.ಎ.ಪಿ. ಗೊಬ್ಬರ ಇಲ್ಲದಿದ್ದರೆ, ನಾವು ಸ್ಪಿಕ್ ಕಡೆ ನೋಡುತ್ತೇವೆ. ಈ ತರಹ ಬಹಳಷ್ಟು ತೊಂದರೆಗಳಾಗುತ್ತಿವೆ. ಆದುದರಿಂದ, ಇದಕ್ಕೆ ಸರ್ಕಾರ ಗಮನ ಹರಿಸಿದ್ದರೂ, ಹೆಚ್ಚು ಒತ್ತು ಕೊಟ್ಟು ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ): ಮಾನ್ಯ ಅಧ್ಯಕ್ಷರೇ, ಸದನದ ಮಾನ್ಯ ಗೌರವಾನ್ವಿತ ಸದಸ್ಯರಾದ ಬೈರೇಗೌಡ, ಜಯಪ್ರಕಾಶ್ ಹೆಗ್ಡೆ, ಶ್ರೀನಿವಾಸಗೌಡರವರುಗಳು ಎಂಸಿಎಫ್ ಬಗ್ಗೆ ಇಲ್ಲಿ ಪ್ರಸ್ತಾಪಿಸಿದ್ದಾರೆ. ಎಂಸಿಎಫ್ ಕಾರ್ಖಾನೆಯನ್ನು ಮುಚ್ಚುವ ಬಗ್ಗೆ ನಾವು ಆದೇಶವನ್ನೂ ಕೊಟ್ಟಿಲ್ಲ, ಮುಚ್ಚಲು ಅವಕಾಶ ನೀಡುತ್ತಿಲ್ಲ. ತಾವು ಕ್ರಿಭ್ಕೋ ತೆಗೆದುಕೊಳ್ಳಬೇಕು, 100 ಕೋಟಿ ರೂಪಾಯಿಗಳನ್ನು ಕೊಡಿ ಎಂದು ಹೇಳಿದಿರಿ. ನಾನು ಬಹಳಷ್ಟು ಸಲ ಹೇಳಿದ್ದೇನೆ ಕೈಗಾರಿಕೆಯನ್ನು ಪ್ರಾರಂಭಿಸುವುದು ಸರ್ಕಾರದ ಪ್ರಿಯಾರಿಟಿಯಲ್ಲ. ಅದನ್ನು ಪ್ರೈವೇಟ್ ಸೆಕ್ಟಾರ್‌ನವರು ಮಾಡಬೇಕು. ಸರ್ಕಾರದ ಮೇಲೆ ಬಹಳಷ್ಟು ಜವಾಬ್ದಾರಿಗಳಿವೆ. ಜನರಿಗೆ ಕುಡಿಯಲು ನೀರು ಒದಗಿಸಬೇಕು, ರಸ್ತೆಗಳಿಲ್ಲ, ಹಳ್ಳಿಗಳಲ್ಲಿ ಆಸ್ಪತ್ರೆಗಳಿಲ್ಲ, ಇದನ್ನೊದಗಿಸುವುದು ನಮ್ಮ ಪ್ರಿಯಾರಿಟಿ. ಆದರೆ, ಮಾನ್ಯ ಬೈರೇಗೌಡರವರು ಹೇಳಿದ ಹಾಗೆ, ಈ ಕಾರ್ಖಾನೆಯನ್ನು ಮುಚ್ಚಿದರೆ, ನಮ್ಮ ರೈತರು ಮತ್ತು ಕಾರ್ಮಿಕರ ಮೇಲೆ ಸಾಕಷ್ಟು ದುಷ್ಪರಿಣಾಮವಾಗಬಹುದೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾಗಾಗಿ, ಇವತ್ತು ಕರ್ನಾಟಕ ರಾಜ್ಯದಲ್ಲಿ ಇದೊಂದೇ ಗೊಬ್ಬರದ ಕಾರ್ಖಾನೆ ಇರುವುದು. ಮುಖ್ಯವಾಗಿ ಸರ್ಕಾರಕ್ಕಿಂತ ಹೆಚ್ಚಿನ ಜವಾಬ್ದಾರಿ ಪ್ರಮೋಟರ್ಸ್ ಮತ್ತು ಬ್ಯಾಂಕರ್ಸ್ ಮೇಲಿದೆ. 1994ನೇ ಇಸವಿಯಿಂದ ಇದು ಬಿಐಎಫ್ಆರ್ ಮುಂದಿದೆ. ಇವತ್ತು ಕೈಗಾರಿಕೆ ಎಕ್ವಿಪ್‌ಮೆಂಟ್ಸ್ ಚೆನ್ನಾಗಿಲ್ಲದಿದ್ದರೂ, Capacity utilisation is more than 100%. ಕೈಗಾರಿಕೆ ಲಾಭ ಮಾಡುತ್ತಿದೆ. ಆದರೆ, ಇವತ್ತು ಬಿಐಎಫ್ಆರ್ ಮುಂದೆ ಪ್ರಮೋಟರ್ಸ್ ಮತ್ತು ಬ್ಯಾಂಕರ್ಸ್ ಒಂದು ಒಪ್ಪಂದಕ್ಕೆ ಬರಬೇಕಾಗಿದೆ. ಆ ಒಪ್ಪಂದ ಇಲ್ಲಿ ಆಗುತ್ತಿಲ್ಲ. ಎಲ್ಲಿಯವರೆಗೆ ಅದು ಆಗುವುದಿಲ್ಲವೋ, ಅಲ್ಲಿಯತನಕ ಇವತ್ತು ಸರ್ಕಾರ ಇಂಟರ್‌ಫಿಯರ್ ಮಾಡಲಿಕ್ಕಾಗುವುದಿಲ್ಲ. 360 ಕೋಟಿ ರೂಪಾಯಿಗಳ ಪ್ಯಾಕೇಜ್ ಬಿಐಎಫ್ಆರ್ ಮುಂದೆ ನಡೆಯುತ್ತಿದೆ. ಇವತ್ತು 3 ವಿಷಯಗಳು ನಮ್ಮ ಮುಂದಿವೆ, ಒನ್ ಟೈಂ ಸೆಟ್ಲ್‌ಮೆಂಟ್ ಮಾಡಬೇಕೆಂಬುದು, ಅದರಲ್ಲಿ 98 ಕೋಟಿ ರೂಪಾಯಿಗಳನ್ನು ಮ್ಯಾನೇಜ್‌ಮೆಂಟಿನವರು ಪ್ರಮೋಟರ್ಸ್‌ಗೆ ಕೊಡಲು ಒಪ್ಪಿದ್ದಾರೆ. ಬ್ಯಾಂಕ್ರ್ಸ್ 133 ಕೋಟಿ ಕೊಡಬೇಕೆಂದು ಇನ್‌ಸಿಸ್ಟ್ ಮಾಡುತ್ತಿದ್ದಾರೆ. ಎರಡನೆಯದಾಗಿ, ವರ್ಕಿಂಗ್ ಕ್ಯಾಪಿಟಲ್ 50 ಕೋಟಿ ರೂಪಾಯಿಗಳನ್ನು ಪ್ರಮೋಟರ್ಸ್ ತರಬೇಕು. ಅದೇ ಪ್ರಕಾರ, ಸರ್ಕಾರದಿಂದ ಹೆಚ್ಚಿನ ಒತ್ತು ಕೊಡಬೇಕಾಗುತ್ತದೆ ಹಾಗಾಗಿ, ಇವತ್ತು ಮುಖ್ಯವಾಗಿ ಇದರಲ್ಲಿ ಬ್ಯಾಂಕರ್ಸ್‌ನಿಂದ ಬಹಳ

ಕಷ್ಟವಿದೆ. ಅವರು ಬಹಳ ಅಡಾಮೆಂಟ್ ನಿಲುವು ತೆಗೆದುಕೊಂಡಿದ್ದಾರೆ. ನಿಮ್ಮ ಸರ್ಕಾರವಿದ್ದಾಗ, ಇವತ್ತಿಗೂ ಸರ್ಕಾರ ಸಹಾನುಭೂತಿಯಿಂದ ಪರಿಶೀಲನೆ ಮಾಡಿದೆ. ಹಾಗಾಗಿ, ಯಾವಾಗಲೂ ಎಂಸಿಎಫ್ ಮುಚ್ಚಲು ಯಾವ ಸರ್ಕಾರವೂ ಪ್ರಯತ್ನ ಮಾಡಿಲ್ಲ; ಸಹಾನುಭೂತಿಯಿಂದ ಪರಿಶೀಲಿಸಿದೆ. ವೈಂಡಿಂಗ್‌ಅಪ್ ಷೋಕಾಸ್ ನೋಟೀಸ್ ಕೊಟ್ಟಿದ್ದಾರೆ. ಬರುವ ನವೆಂಬರ್ 25ಕ್ಕೆ ಪುನಃ ಬಿಐಎಫ್‌ಆರ್ ಮುಂದೆ ಬರುತ್ತದೆ. ಸರ್ಕಾರದ ಮುಂದೆ 3-4 ಪ್ರಸ್ತಾವನೆಗಳು ಬಂದಿವೆ. ಯಾವುವೆಂದರೆ, ನಾವು 14.59 ಕೋಟಿ ರೂಪಾಯಿಗಳ ಸಬಾರ್ಡಿನೇಟ್ ಲೋನ್ ಹಾಕಬೇಕೆಂದು ಹೇಳುತ್ತಿದ್ದಾರೆ. ಎರಡನೆಯದಾಗಿ, 13.63 ಕೋಟಿ ರೂಪಾಯಿಗಳ ಸೇಲ್ಸ್‌ಟ್ಯಾಕ್ಸ್ ಲೋನ್‌ನ್ನು ಹಿಂದಿನ ಸರ್ಕಾರವೂ ಮುಂದೆ ಹಾಕಿದೆ, ಪುನಃ ಅದನ್ನು ಮುಂದೆ ಹಾಕಬೇಕೆಂದು ಹೇಳುತ್ತಿದ್ದಾರೆ. ಮತ್ತೊಂದು ಕಂಟಿಂಜೆನ್ಸಿ ಲೋನ್ಸ್ 46 ಕೋಟಿ ರೂಪಾಯಿಗಳಿವೆ. ಜನರೇಟರ್ಸ್, ಕ್ಯಾಪ್ಟಿವ್ ಪವರ್ ಮಾಡಿದಾಗ, ಡೀಸೆಲ್ ಯೂಸ್ ಮಾಡಿದರೆ ಸೇಲ್ಸ್‌ಟ್ಯಾಕ್ಸ್ ವಾಪಸ್ ಕೊಡುತ್ತೇವೆ. ಅವರೇನು ಫ್ಯೂಯಲ್ ಯೂಸ್ ಮಾಡುತ್ತಾರೆ, ಅದಕ್ಕೂ ಕೊಡಬೇಕೆಂದು ಕೇಳುತ್ತಿದ್ದಾರೆ. ಈ ಮೂರು ಸಮಸ್ಯೆಗಳು ಸರ್ಕಾರದ ಮುಂದೆ ಹಲವಾರು ವರ್ಷಗಳಿಂದಿವೆ. ಸರ್ಕಾರವೂ ಮುಂದೆ ಹಾಕುತ್ತಾ ಬಂದಿವೆ. ಹೊಸದಾಗಿ ಅವರೆ ಟಿ.ಓ.ಟಿ ಮತ್ತು ಎಂಟ್ರಿ ಟ್ಯಾಕ್ಸ್ 60 ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದಾರೆ. ರೈತರ ಹಿತದೃಷ್ಟಿಯಿಂದ ಅವರಿಗೆ ಅನುಕೂಲವಾಗಲೆಂದು ಸರ್ಕಾರ ಕಳೆದ 2 ವರ್ಷಗಳು ಟಿ.ಓ.ಟಿಯನ್ನು ಎಗ್ಜೆಮ್ಪ್ಟ್ ಮಾಡಿದೆ. ಹಾಗಾಗಿ, ಇವತ್ತು ಎಲ್ಲ ವಿಚಾರಗಳೂ ಸರ್ಕಾರದ ಮುಂದಿವೆ. ಈಗಾಗಲೇ ನಮ್ಮ ಹೈ-ಪವರ್ ಇದ್ದು, ಅದಕ್ಕೆ ಚೀಫ್ ಸೆಕ್ರೆಟರಿಯವರು ಅಧ್ಯಕ್ಷತೆ ವಹಿಸುವರು. ಪ್ರಸ್ತಾವನೆಯನ್ನು ಅವರಿಗೆ ಕಳುಹಿಸಿದ್ದೇವೆ. ಇದಾದನಂತರ, ಇದೇ ಬರುವ ಕ್ಯಾಬಿನೆಟ್ ಮುಂದೆ ಇಡುತ್ತೇವೆ. ಸರ್ಕಾರದಿಂದ ಏನು ಸಹಾಯ ಮಾಡಲು ಸಾಧ್ಯವೋ ಅಷ್ಟನ್ನೂ ಮಾಡುತ್ತೇವೆ. ಸರ್ಕಾರಕ್ಕೂ ಕೆಲವು ಇತಿಮಿತಿಗಳಿದ್ದು, ಅದರ ಮಿತಿಯಲ್ಲಿ ಕೆಲಸ ಮಾಡಲು ಪ್ರಯತ್ನಿಸುತ್ತೇವೆ. 1990ನೇ ಇಸವಿಯಲ್ಲಿ ಆಗಿದ್ದ ಪ್ರೈವೆಟೈಜೇಷನ್, only Management was changed.

ವಿಕ್ರಾಂತ್ ಟೈರ್ಸ್ ಪ್ರೈವೇಟೈಸ್ ಮಾಡಿದೆವು ಎಂದು-ತಾವು ಹೇಳಿದಿರಿ. ನಿಮ್ಮ ಕಾಲದಲ್ಲೇ ಆಯಿತು. ಆಗ ನಾವಿದ್ದೆವು.

ಶ್ರೀ ಸಿ. ಭೈರೇಗೌಡ : ನಮ್ಮ ಸರ್ಕಾರವಿದ್ದಾಗ ಸಚಿವಸಂಪುಟದಲ್ಲಿ ಹೆಚ್ಚು ವಿಷಯಗಳು ಕೈಗಾರಿಕೆಗೆ ಸಂಬಂಧಿಸಿದವು ಬಂದಿದ್ದವು. ಒಂದೇ ಸಚಿವಸಂಪುಟದಲ್ಲಿ 7-8-10 ವಿಷಯ...

ಶ್ರೀ ಆರ್.ವಿ. ದೇಶಪಾಂಡೆ : ಕರ್ನಾಟಕ ರಾಜ್ಯದಲ್ಲಿ ಹಲವಾರು ಕೈಗಾರಿಕೆಗಳಿವೆ. ಟಯೋಟಾ ಮತ್ತು ಟಿ.ವಿ.ಎಸ್. ಬಂದವು.

ಶ್ರೀ ಸಿ. ಭೈರೇಗೌಡ : ನಿಮ್ಮ ಸರ್ಕಾರವೆಂದು ಹೇಳಿದಿರಿ. ಆಗ ನಾನೂ ಇದ್ದೆ ಎಂದು ಹೇಳಿ, ನಾಚಿಕೆ ಏಕೆ?

ಶ್ರೀ ಆರ್.ವಿ. ದೇಶಪಾಂಡೆ : ಹಾಗಾಗಿ, ಇವತ್ತು ಸರ್ಕಾರಕ್ಕೂ ಕೆಲವು ಜವಾಬ್ದಾರಿಗಳಿವೆ. ಸರ್ಕಾರಕ್ಕೂ ಕೆಲವು ಇತಿಮಿತಿಗಳಿವೆ. ಇದರೊಳಗೆ ಈ ಕೈಗಾರಿಕೆಗೆ ಎಷ್ಟು ಸಹಾಯ ಮಾಡಲು ಸಾಧ್ಯವೋ, ಅಷ್ಟನ್ನು ರೈತರ, ಕಾರ್ಮಿಕರ ಹಿತವನ್ನಿಟ್ಟುಕೊಂಡು

ಮಾಡುತ್ತೇವೆಂದು ಭರವಸೆ ಕೊಡುತ್ತೇನೆ. ಆದಷ್ಟು ಬೇಗ ನಾವು ಬಿಐಎಫ್‌ಆರ್ ಮುಂದೆ ಹೋಗಿ, ನಮ್ಮ ನಿಲುವು ತಿಳಿಸುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ: 100 ಕೋಟಿ ರೂಪಾಯಿಗಳನ್ನು ಕೊಡಿ, ನಾವು ಮುಂದೆ ನಿಂತು ನಡೆಸುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ: ನೀವು ಕ್ರಿಭ್ಕೋ ಛೇರ್ಮನ್ ಇದ್ದಾಗ, ನಿಮ್ಮ ಸರ್ಕಾರ ಇದ್ದಾಗ, ನೀವು ಮಾಡಿಕೊಳ್ಳಲಾಗಲಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ: ನೀವು ಒಪ್ಪಲಿಲ್ಲ. ಆಗ ನೀವು ಒಪ್ಪಿದ್ದರೆ, ರಾಜ್ಯಕ್ಕೆ ಒಳ್ಳೆಯ ಉಪಯೋಗವಾಗುತ್ತಿತ್ತು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದಕ್ಕೆ ಸರ್ಕಾರದಿಂದ ಪುನಃ ದುಡ್ಡು ಕೊಡುವುದಕ್ಕಿಂತ, ಕ್ರಿಭ್ಕೋ ತೆಗೆದುಕೊಳ್ಳಲಿ.

ಶ್ರೀ ಆರ್.ವಿ. ದೇಶಪಾಂಡೆ : ಇದು ಬಿಐಎಫ್‌ಆರ್ ಮುಂದಿದೆ. ಕ್ರಿಭ್ಕೋ ತೆಗೆದುಕೊಳ್ಳಬೇಕೋ, ಇಫ್ಕೋ ತೆಗೆದುಕೊಳ್ಳಬೇಕೋ, ಸ್ಟೈಕ್ ತೆಗೆದುಕೊಳ್ಳಬೇಕೋ ಎಂಬುದನ್ನು ಹೇಳಲು ನಮಗೆ ಅಧಿಕಾರವಿಲ್ಲ. ಪ್ರಮೋಟರ್ಸ್ ಮುಂದೆ ಬರಬೇಕು, ಅವರು ಮುಂದೆ ಬರುತ್ತಿಲ್ಲ. They are telling that they would contribute only 20 crores. ಬ್ಯಾಂಕರ್ಸ್ ಜವಾಬ್ದಾರಿಯೂ ಇದ್ದು, ಅವರು ಅಡಾಮೆಂಟ್ ಆಗಿ ಬಿಹೇವ್ ಮಾಡುತ್ತಿದ್ದಾರೆ.

ಶ್ರೀ ಸಿ. ಭೈರೇಗೌಡ: ಇದಕ್ಕೆಲ್ಲ ಕಾರಣವಿದೆ. ಅವೆಲ್ಲವನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದು ಏಕಾಗುತ್ತಿದೆ, ಸಿಕ್ ಏಕಾಯಿತು?

ಶ್ರೀ ಆರ್.ವಿ. ದೇಶಪಾಂಡೆ : ಸಿಕ್ ಆಗಿಲ್ಲ.

ಶ್ರೀ ಸಿ. ಭೈರೇಗೌಡ: ಇವೆಲ್ಲ ಯಾವ ಉದ್ದೇಶದಿಂದ ನಡೆಯುತ್ತಿವೆ ಎಂಬುದೆಲ್ಲ ನನಗೆ ಗೊತ್ತಿದೆ.

ಶ್ರೀ ಕೆ. ಶ್ರೀನಿವಾಸಗೌಡ: ಐಡಿಬಿಐ ಛೇರ್ಮನ್, ಬ್ಯಾಂಕರ್ಸ್ ಹತ್ತಿರ ಸಹ ಡಿಸ್ಕಸ್ ಮಾಡಿದೆವು. ಗುಣಕ್ಕೆ ಮತ್ಸರ ಬೇಡ, ಮಾನ್ಯ ದೇವೇಗೌಡರವರು ಪ್ರಧಾನಿಗಳಾಗಿದ್ದಾಗ, ನನ್ನ ಮೂಲಕ ಎಲ್ಲರೊಡನೆ ಮಾತನಾಡಿದ್ದಾರೆ. ಸರ್ಕಾರ 100 ಕೋಟಿ ರೂಪಾಯಿಗಳನ್ನು ಕೊಡಲಿಕ್ಕಾಗದಿದ್ದರಿಂದಾಗಿ ನಮ್ಮ ರಾಜ್ಯಕ್ಕೆ ವಿಷಮ ಪರಿಸ್ಥಿತಿ ಬಂದಿದೆ. ಆಗಲೂ ನೀವು ಮಂತ್ರಿಗಳಾಗಿದ್ದಿರಿ, ಈಗಲೂ ಆ ಖಾತೆಯ ಮಂತ್ರಿಗಳಾಗಿದ್ದೀರಿ, ತಾವೇ ಯೋಚಿಸಿ. ನಮ್ಮ ರಾಜ್ಯಕ್ಕೆ ಬರುವ ಒಂದು ಒಳ್ಳೆಯ ಫ್ಯಾಕ್ಟರಿಯನ್ನು ಏಕೆ ಹಾಳು ಮಾಡಿಕೊಳ್ಳಬೇಕು? ಅದನ್ನು ಉಳಿಸಿಕೊಳ್ಳೋಣ. ನೀವು ದೊಡ್ಡ ಮನಸ್ಸು ಮಾಡಿ, ಈಗಲಾದರೂ ಅದರ ಬಗ್ಗೆ ಗಮನಹರಿಸಿ.

ಶ್ರೀ ಆರ್.ವಿ. ದೇಶಪಾಂಡೆ: 100 ಕೋಟಿ ರೂಪಾಯಿಗಳನ್ನು ಕೊಡಲಾಗುವುದಿಲ್ಲವೆಂಬ ತೀರ್ಮಾನವನ್ನು ಹಿಂದೆ ಸಹ ತೆಗೆದುಕೊಂಡಿರುವುದು ಒಬ್ಬ ವ್ಯಕ್ತಿಯಲ್ಲ, ಸರ್ಕಾರ. ಇವತ್ತು ಸಹ ಕ್ರಿಭ್ಕೋ ಪ್ರಪೋಸಲ್ ನಮ್ಮ ಬಿಐಎಫ್‌ಆರ್ ಮುಂದಿಲ್ಲ. ತಾವು ಡೈರೆಕ್ಟರ್ ಇದ್ದೀರಿ,

ಒಂದು ಪ್ರಪೋಸಲ್‌ನ್ನು ಬಿಐಎಫ್‌ಆರ್ ಮುಂದಿಡಿ. ಆ ಪ್ರಪೋಸಲ್ ಬಗ್ಗೆ ನಮ್ಮನ್ನು ಕೇಳಿದಾಗ, ನಾವು ಅಭಿಪ್ರಾಯ ಕೊಡುತ್ತೇವೆ. ಇವತ್ತೂ ಸ್ಪಷ್ಟವಾಗಿ ಹೇಳುತ್ತೇನೆ, ಕೈಗಾರಿಕೆಯನ್ನು ಪ್ರೈವೇಟ್ ಸೆಕ್ಟಾರ್‌ನಲ್ಲಿ ನಡೆಸಲು ಸರ್ಕಾರದಲ್ಲಿ ಹಣವಿಲ್ಲ. ನಮಗೆ ಮೂಲಭೂತವಾಗಿ ಪ್ರೆಯಾರಿಟೀಸ್ ಇರುವುದು, ಗ್ರಾಮಾಂತರ, ನಗರ ಪ್ರದೇಶದ ಬಡ ಜನರಿಗೆ ಮನೆ ಇಲ್ಲ, ಕುಡಿಯಲು ನೀರಿಲ್ಲ, ಇದನ್ನು ಒದಗಿಸಬೇಕಾಗಿದೆ. ಇಂಡಸ್ಟ್ರೀಗೆ ಎಷ್ಟು ಹಣ ಕೊಡಬೇಕೆಂಬ ಬಗ್ಗೆಯೂ ಒಂದು ಮಿತಿ ಇದೆ. ಇದು ನನ್ನ ಅಭಿಪ್ರಾಯ. ಕೈಗಾರಿಕಾ ಇಲಾಖೆ ಈ ಹಣವನ್ನು ಮೇಜರ್ ಇಂಡಸ್ಟ್ರಿ Large and medium industries should never depend on the budget of the Government. On the other hand they should generate income and give to the Government. ಇವತ್ತು ಸರ್ಕಾರದಿಂದ ಏನೇನು ಕೈಗಾರಿಕೆಗಳನ್ನು ಪ್ರಾರಂಭಿಸಿದ್ದೇವೆ, ಅದಕ್ಕೆ ಎಷ್ಟೋ ಸಹಾಯ ಮಾಡಿದ್ದೇವೆ. ಇವತ್ತು ಪರಿಸ್ಥಿತಿ ಏನಾಗಿದೆಯೆಂದರೆ, ಪ್ರತಿಯೊಂದು ಕೈಗಾರಿಕೆಯೂ ಅನಾರೋಗ್ಯವಾಗಿದೆ. ಪ್ರತಿಯೊಂದು ಕೈಗಾರಿಕೆಗೆ 10-20 ಕೋಟಿ ರೂಪಾಯಿಗಳನ್ನು ಕೊಡುತ್ತಾ ಹೋದರೆ, ಏನಾಗುತ್ತದೆ? ಆ ಕೈಗಾರಿಕೆಯ ಪರಿಸ್ಥಿತಿ ನೋಡಿಕೊಂಡು ಪ್ರೈವೇಟೈಸ್ ಮಾಡುವುದಕ್ಕೆ ಹೋದರೆ, ಕಾರ್ಮಿಕರ, ಸರ್ಕಾರದ ಹಿತ ನೋಡಿಕೊಂಡು ಮಾಡಬೇಕಾಗುತ್ತದೆ. ಈ ಕೈಗಾರಿಕೆ ಬಗ್ಗೆ ಮಾತ್ರ ಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತದೆ.

ಶ್ರೀ ವಿಜಯಕುಮಾರ್ ಶೆಟ್ಟಿ(ಸುರತ್ಕಲ್): ಬಿಐಎಫ್‌ಆರ್‌ನವರು ಎಂಪ್ಲಾಯೀಸ್ ಯೂನಿಯನ್‌ಗೆ ಅಧಿಕಾರ ಕೊಟ್ಟಿದ್ದಾರೆ. 30ನೇ ತಾರೀಖಿನೊಳಗೆ 1 ಕೋಟಿ ರೂಪಾಯಿಗಳನ್ನು ಕೊಡಬೇಕು, ಸುಮಾರು 50 ಕೋಟಿ ರೂಪಾಯಿಗಳ ವರ್ಕಿಂಗ್ ಕ್ಯಾಪಿಟಲ್ ಕೊಟ್ಟರೆ, ಅದನ್ನು ನಡೆಸಲು ಅಧಿಕಾರ ಕೊಡುತ್ತಾರೆಂದು ಬರೆದು ಕೊಟ್ಟಿದ್ದಾರೆ. ಈ ವಿಷಯ ಮಾನ್ಯ ದೇಶಪಾಂಡೆಯವರಿಗೆ ಸರಿಯಾಗಿ ಗೊತ್ತಿಲ್ಲವೆಂದು ಕಾಣುತ್ತದೆ. ಅದನ್ನು ತಿಳಿದುಕೊಳ್ಳುವುದು ಒಳ್ಳೆಯದು. ಈಗಾಗಲೇ ಎಂಪ್ಲಾಯೀಸ್ ಯೂನಿಯನ್‌ಗೆ ಈ ಸಂಸ್ಥೆಯನ್ನು ಬಿಟ್ಟುಕೊಡಲು ಬಿಐಎಫ್‌ಆರ್‌ನವರು ಆದೇಶ ಹೊರಡಿಸಿದ್ದಾರೆ. ಎಂಪ್ಲಾಯೀಸ್ ಯೂನಿಯನ್ ಖಂಡಿತವಾಗಿಯೂ ಒಳ್ಳೆಯ ರೀತಿಯಲ್ಲಿ, ಸುವ್ಯವಸ್ಥಿತ ರೀತಿಯಲ್ಲಿ ಅಲ್ಲಿರುವ ಎಂಪ್ಲಾಯೀಸ್ ಮತ್ತು ಇತರರು ಸೇರಿ ನಡೆಸುತ್ತಾರೆ. ಈಗಾಗಲೇ ಇತರೆಡೆ ಈ ತರಹ ನಡೆಯುತ್ತಿದೆ. ಅವರಿಗೊಂದು ಅವಕಾಶ ಕೊಟ್ಟರೆ, ಅದನ್ನು ಇನ್ನಷ್ಟು ವ್ಯವಸ್ಥಿತವಾಗಿ, ರೈತರ ಬೇಡಿಕೆಗೆ ಸ್ಪಂದಿಸಿಕೊಂಡು ಹೋಗಲು ಸಹಕಾರಿಯಾಗುತ್ತದೆ. ಅದಕ್ಕೆ ನಮ್ಮ ಸರ್ಕಾರದವರು ಅವರಿಗೆ ಉತ್ತೇಜನ ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ: ಯಾರಿಗೆ ಅವಕಾಶ ಕೊಡಬೇಕೆಂಬುದು ನಮ್ಮ ಕೈಯಲ್ಲಿಲ್ಲ. ಅದನ್ನು ಬಿಐಎಫ್‌ಆರ್‌ನವರು ನಿರ್ಧರಿಸಬೇಕು. ಕಾರ್ಮಿಕರು ಸಹ ಅದನ್ನು ನಡೆಸುತ್ತೇವೆಂದು ಬಿಐಎಫ್‌ಆರ್ ಮುಂದೆ ಪ್ರಸ್ತಾವನೆ ಕೊಟ್ಟರು.

SRI VIJAYAKUMAR SHETTY: BIFR has agreed that the Employees Union can run this company...

ಶ್ರೀ ಆರ್.ವಿ. ದೇಶಪಾಂಡೆ: ಅಂಥ ಪ್ರಸ್ತಾವನೆ ಬಂದಿತ್ತು, ಅದು ಫೀಸಿಬಲ್ ಇಲ್ಲ, ಬಿಐಎಫ್ಆರ್ ಒಪ್ಪಿಕೊಂಡಿಲ್ಲ. ಇಷ್ಟು ನನಗೆ ಗೊತ್ತು.

(4) ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಅಧ್ಯಕ್ಷರು: ಹನ್ನೊಂದನೇಯ ವಿಧಾನ ಸಭೆಯ ಪ್ರಥಮ ಅಧಿವೇಶನವು ದಿನಾಂಕ: 25.10.1999ರಿಂದ 30.10.1999ರವರೆಗೆ ಮತ್ತು ದಿನಾಂಕ: 11, 12 ಮತ್ತು 13ನೇ ನವೆಂಬರ್ 1999ರಂದು ಸಮಾವೇಶಗೊಂಡು ಒಟ್ಟು 9 ದಿನಗಳ ಕಾರ್ಯಕಲಾಪಗಳನ್ನು ನಡೆಸಿ 38 ಗಂಟೆಗಳ ಕಾಲ ಸಭೆಯನ್ನು ನಡೆಸಿರುತ್ತದೆ.

ಅಧಿವೇಶನದ ಪ್ರಾರಂಭ ದಿನದಂದು ಹನ್ನೊಂದನೇ ವಿಧಾನ ಸಭೆಗೆ ಚುನಾಯಿತರಾದ ಸದಸ್ಯರುಗಳು ಹಂಗಾಮಿ ಸಭಾಧ್ಯಕ್ಷರ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ದಿನಾಂಕ:25.10.1999ರಂದು 206 ಸದಸ್ಯರು, ದಿನಾಂಕ: 26.10.1999ರಂದು 15 ಸದಸ್ಯರು, ದಿನಾಂಕ: 28.10.1999ರಂದು 2 ಸದಸ್ಯರು ಮತ್ತು ದಿನಾಂಕ: 11.11.1999ರಂದು ಓರ್ವ ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದರು. ಸಭಾಧ್ಯಕ್ಷರ ಚುನಾವಣೆಯು ದಿನಾಂಕ: 26.10.1999ರಂದು ನಡೆದಿದ್ದು, ಸಭಾಧ್ಯಕ್ಷನಾದ ನನ್ನನ್ನು ಸರ್ವಾನುಮತದಿಂದ ಚುನಾಯಿಸಿರುತ್ತಾರೆ.

ಈ ಅವಧಿಯಲ್ಲಿ ದಿನಾಂಕ 27ನೇ ನವೆಂಬರ್ 1999ರಂದು ಕರ್ನಾಟಕದ ಸನ್ಮಾನ್ಯ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ, ಭಾಷಣ ಮಾಡಿರುತ್ತಾರೆ. ರಾಜ್ಯಪಾಲರ ಭಾಷಣದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆಯು 5 ದಿವಸಗಳ ಕಾಲ ನಡೆದಿದ್ದು, 42 ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿರುತ್ತಾರೆ. ಚರ್ಚೆಯು ಸುಮಾರು 18 ಗಂಟೆಗಳ ಕಾಲ ನಡೆದು, ಚರ್ಚೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಇಂದು ಉತ್ತರ ನೀಡುವ ಮೂಲಕ ವಂದನಾರ್ಪಣಾ ನಿರ್ಣಯವನ್ನು ಸದನವು ಅಂಗೀಕರಿಸಿದೆ.

ಈ ಅವಧಿಯಲ್ಲಿ ಇತ್ತೀಚೆಗೆ ನಿಧನರಾದ 6 ಮಂದಿ ಮಾಜಿ ವಿಧಾನ ಸಭೆಯ ಸದಸ್ಯರು, ಪತ್ರಕರ್ತ ಶ್ರೀ ವೈ.ಎನ್. ಕೃಷ್ಣಮೂರ್ತಿ ಮತ್ತು ಒರಿಸ್ಸಾದಲ್ಲಿ ಪ್ರಕೃತಿ ವಿಕೋಪದಿಂದ ಗೌರವಾರ್ಥ ಸಂತಾಪ ಸೂಚನಾ ನಿರ್ಣಯವನ್ನು ಅಂಗೀಕರಿಸಲಾಗಿದೆ.

ನಿಯಮ 60ರ ಮೇರೆಗೆ, 5 ನಿಲುವಳಿ ಸೂಚನೆಗಳು ಸ್ವೀಕರಿಸಿದ್ದು, ಮಾನ್ಯ ಸದಸ್ಯರುಗಳಿಗೆ ಪ್ರಾರಂಭಿಕವಾಗಿ ಪ್ರಸ್ತಾಪಿಸಲು ಅವಕಾಶ ನೀಡಿ ನಿಲುವಳಿ ಸೂಚನೆಗೆ ಒಪ್ಪಿಗೆಯನ್ನು ನಿರಾಕರಿಸಲಾಯಿತು. ಈ ಅವಧಿಯಲ್ಲಿ 86 ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಗಿರುತ್ತದೆ. ಸಂಸತ್ತಿನ ಉಭಯ ಸದನಗಳು ಅಂಗೀಕರಿಸಿದಂತೆ ಸಂವಿಧಾನ (ಎಂಭತ್ನಾಲ್ಕನೇ ತಿದ್ದುಪಡಿ) ವಿಧೇಯಕ, 1999ರ ತಿದ್ದುಪಡಿ ಸಮರ್ಥನೆಗೆ ನಿರ್ಣಯವನ್ನು ಮಂಡಿಸಿ ಸರ್ವಾನುಮತದಿಂದ ಅಂಗೀಕರಿಸಲಾಗಿದೆ.

ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ಸುಲಲಿತವಾಗಿ ಸದನ ನಡೆಸಲು ನನ್ನೊಡನೆ ಸಹಕರಿಸಿದ ಸಭಾ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳಿಗೂ, ಸಚಿವ ಸಂಪುಟದ ಸದಸ್ಯರುಗಳಿಗೂ, ವಿರೋಧಪಕ್ಷದ ನಾಯಕರಿಗೂ, ವಿವಿಧ ಪಕ್ಷಗಳ ನಾಯಕರುಗಳು, ವಿಧಾನ